ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 4976

ಸದಸ್ಯರ ಹೆಸರು : ಶ್ರೀ ಅಪ್ಪಾಸಾಹೇಬ್ (ಅಪ್ಪು) ಮಲ್ಲಪ್ಪ ಪಟ್ಟಣ ಶೆಟ್ಟಿ

ಉತ್ತರಿಸಬೇಕಾದ ದಿನಾಂಕ : 11–07–2005

ಉತ್ತರಿಸುವ ಸಚಿವರು : ಶ್ರೀ ಡಿ.ಟಿ. ಜಂಗ್ಲಿಕುಮಾರ್ ಪ್ರವಾಸೋದ್ಯಮಿ ಸಚಿವರು

	ಪ್ರಶ್ನೆ	ಉತ್ತರ
ಅ	ವಿಶ್ವವಿಖ್ಯಾತ ಗೋಳಗುಮ್ಮಟ ಸ್ಮಾರಕ ವಿಜಾಪುರದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು
ಆ	ವಿಜಾಪುರಕ್ಕೆ ದೇಶ ವಿದೇಶಗಳಿಂದ ಪ್ರವಾಸಿಗರನ್ನು ಆಕರ್ಷಸಲು ಸರ್ಕಾರ ತೀರ್ಮಾನಿಸಿದೆಯೇ;	ಹೌದು
ಇ	ಪ್ರತಿ ವರ್ಷ ವಿಜಾಪುರಕ್ಕೆ ಭೇಟಿ ಕೊಡುವ ದೇಶೀಯ ಹಾಗೂ ವಿದೇಶಿ ಪ್ರವಾಸಿಗರ ಸಂಖ್ಯೆ ಎಷ್ಟು;	ಪ್ರತಿ ವರ್ಷ ವಿಜಾಪುರಕ್ಕೆ ಸುಮಾರು 5.00 ಲಕ್ಷ ದೇಶೀಯ, 2000 ವಿದೇಶಿ ಪ್ರವಾಸಿಗರು ಭೇಟಿ ನೀಡುತ್ತಿದ್ದಾರೆ. About 5.00 lakhs domestic Tourists and 2000 foreign tourists are visiting Bijapur every year.
ಈ	ಪ್ರವಾಸಿಗರಿಂದ ಪ್ರತಿ ವರ್ಷ ಸರ್ಕಾರಕ್ಕೆ ಬರುತ್ತಿರುವ ಆದಾಯ ಎಷ್ಟು?	ಯಾವುದೇ ಪ್ರತ್ಯಕ್ಷ ಆದಾಯ ಬರುವುದಿಲ್ಲ. ಆದರೆ ಹೋಟೆಲ್‌ಗಳ ಮೇಲೆ ಸರ್ಕಾರ ವಿಧಿಸುವ ತೆರಿಗೆ, ವಾಹನ ತೆರಿಗೆ, ಪ್ರವಾಸಿಗರು ಖರೀದಿಸುವ ಸಾಮಗ್ರಿಗಳ ಮೇಲೆ ತೆರಿಗೆ ಮುಂತಾದ ಪರೋಕ್ಷ ಆದಾಯ ಬರುತ್ತದೆ. ಆದರೆ ಇದನ್ನು ನಿಖರವಾಗಿ ಹೇಳಲು ಸಾಧ್ಯವಿಲ್ಲ.

ಉ	ಪ್ರವಾಸಿ ಸ್ಥಳಗಳ ಅಭಿವೃದ್ಧಿಗಾಗಿ ಸರ್ಕಾರ ವಿಶೇಷ ಪ್ಯಾಕೇಜ್ ಘೋಸಲು ಉದ್ದೇಶಿಸಿದೇಯೇ?	ಇಲ್ಲ. No.
ಊ	ಹಾಗಾದಲ್ಲಿ ಐತಿಹಾಸಿಕ "ಹಿನ್ನೆಲೆಯುಳ್ಳ "ವಿಜಾಪುರ ನಗರದ ಅಭಿವೃದ್ಧಿಗೆ "ವಿಶೇಷ ಪ್ಯಾಕೇಜ್‌ನ್ನು ಸರ್ಕಾರ ಒದಗಿಸುವುದೇ?	ಉದ್ಭವಿಸುವುದಿಲ್ಲ. Does not arise.
ಋ	ಹಾಗಿದ್ದಲ್ಲಿ ಯಾವಾಗ "ವಿಶೇಷ ಪ್ಯಾಕೇಜ್ ಘೋಸಲಾಗುವುದು; ಈ	ಉದ್ಭವಿಸುವುದಿಲ್ಲ. Does not arise.
ಋೂ	ಪ್ರವಾಸಿ ಸ್ಥಳ ವಿಜಾಪುರದ ಅಭಿವೃದ್ಧಿಗಾಗಿ ಸರ್ಕಾರ ಯಾವ ಯಾವ ಕ್ರಮಗಳನ್ನು ಕೈಗೊಂಡಿದೆ; (ವಿವರ ನೀಡುವುದು)	ಕೇಂದ್ರದ ನೆರವಿನೊಂದಿಗೆ ಈ ಕೆಳಕಂಡ ಯೋಜನೆಗಳನ್ನು ಬಿಜಾಪುರದಲ್ಲಿ ಕೈಗೊಳ್ಳಲಾಗಿದೆ. 1. ಗೋಲ್‌ಗುಂಬಜ್‌ಗೆ ಹೊನಲು ಬೆಳಕು ವ್ಯವಸ್ಥೆ. 2. ಯಾತ್ರಿನಿವಾಸ ನಿರ್ಮಾಣ 3. ಪ್ರವಾಸಿ ಮಾಹಿತಿ ಕೇಂದ್ರದ ನಿರ್ಮಾಣ 4. ಮೂರು ಶೌಚಾಲಯ ನಿರ್ಮಿಸಲಾಗಿದ್ದು, ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸಲಾಗಿದೆ. ಇನ್ನು ನಾಲ್ಕು ಶೌಚಾಲಯ ನಿರ್ಮಿಸಲು ಹಾಗೂ ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸಲು ಕ್ರಮ ಕೈಗೊಳ್ಳಲಾಗಿದೆ.

		ತಾಜ್ ಬಾವಡಿ ಅಭಿವೃದ್ಧಿಗಾಗಿ ರಾಜ್ಯ ಯೋಜನೆಯಡಿಯಲ್ಲಿ ಕ್ರಮ ಕೈಗೊಳ್ಳಲಾಗಿದೆ. ಬಿಜಾಪುರದ ಪ್ರವಾಸಿ ಆಕರ್ಷಣೆಗಳ ಬಗ್ಗೆ ಪ್ರವಾಸಿಗಳಿಗೆ ಮಾಹಿತಿ ಒದಗಿಸಲು ಆಕರ್ಷಕ ಮಡಿಕೆಗಳನ್ನು ಮುದ್ರಿಸಲಾಗಿದೆ.

ಪ್ರಶ್ನೆ : 394(4976)

ಉತ್ತರಪಟ್ಟಿಯನ್ನು ಲಗತ್ತಿಸಿದೆ.

ಶ್ರೀ ಅಪ್ಪಾಸಾಹೇಬ್ (ಅಪ್ಪು): ಮಲ್ಲಪ್ಪ ಪಟ್ಟಣ ಶೆಟ್ಟಿ : ಮಾನ್ಯ ಅಧ್ಯಕ್ಷರೇ, ನಾನು ವಿಜಾಪುರದ ಪ್ರವಾಸೋದ್ಯಮದ ಅಭಿವೃದ್ಧಿಗಾಗಿ ವಿಶೇಷ ಪ್ಯಾಕೇಜ್ ಅನ್ನು ಕೇಳಲಾಗಿದ್ದು, ಅದಕ್ಕೆ ಉದ್ಭವಿಸುವುದಿಲ್ಲವೆಂದು ತಿಳಿಸಲಾಗಿದೆ, ಯಾವುದೇ ಒಂದು ಅವಕಾಶ ಇಲ್ಲವೆಂದು ಮಾನ್ಯ ಸಚಿವರಿಂದ ಉತ್ತರ ಬಂದಿದೆ. ನಮ್ಮ ವಿಜಾಪುರ ನಗರ ಐತಿಹಾಸಿಕ ಸ್ಥಳಗಳನ್ನೊಳಗೊಂಡಿದೆ. ಇಲ್ಲಿ ಗೋಳಗುಮ್ಮಟ, ಹಲವಾರು ವಿಶೇಷವಾದ ಆಕರ್ಷಣೀಯ ಸ್ಥಳವನ್ನೊಳಗೊಂಡಿದೆ. ಇದರ ಬಗ್ಗೆ ಮಾನ್ಯ ಸಚಿವರು ಕಾಳಜಿಯನ್ನು ವಹಿಸಿ ಇದಕ್ಕೆ ವಿಶೇಷ ಪ್ಯಾಕೇಜ್ ಅನ್ನು ಕೊಟ್ಟು, ಇಲ್ಲಿ ಬರು ವಂತಹ ಪ್ರವಾಸಿಗರಿಗೆ ಇದು ಸುಂದರವಾಗಿ ಕಾಣುವಂತೆ ಮಾಡುವಂಥಾದ್ದರ ಬಗ್ಗೆ ಮಾನ್ಯ ಸಚಿವರು ಏನಾದರೂ ಉತ್ತರವನ್ನು ಕೊಡುತ್ತಾರೆಂದು ನಾನು ಕೇಳಬಯಸುತ್ತೇನೆ.

ಶ್ರೀ ಡಿ.ಟಿ. ಜಯಕುಮಾರ್ :– ಮಾನ್ಯ ಅಧ್ಯಕ್ಷರೇ, ವಿಜಾಪುರದ ಗೋಳಗುಮ್ಮಟ ಪಿಸುಮಾತಿನ ಗ್ಯಾಲರಿಯೆಂದು ವಿಶ್ವವಿಖ್ಯಾತವಾಗಿದೆ. ಈಗಾಗಲೇ ಗೋಲಗುಂಬಜ್‌ಗೆ ಸುಮಾರು 15ಕೋಟಿ 38ಲಕ್ಷ ರೂಪಾಯಿಗಳ ಅಂದಾಜು ವೆಚ್ಚದಲ್ಲಿ ಹೊಸದೊಂದು ಬೆಳಕಿನ ವ್ಯವಸ್ಥೆ, ಸೌಂಡ್ ಆಂಡ್ ಲೈಟ್ ಎನ್ನುವಂತಹ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೇವೆ. ಅದು ಕಾರ್ಯರೂಪದಲ್ಲಿ ನಡೆಯುತ್ತಾ ಇದೆ, ಮತ್ತೆ 60 ಲಕ್ಷ ರೂಪಾಯಿಗಳಲ್ಲಿ ಪ್ರವಾಸೋದ್ಯಮಕ್ಕೆ ಯಾತ್ರಿನಿವಾಸವನ್ನು ಮಾಡಿದ್ದೇವೆ. ಮತ್ತೆ ಪ್ರವಾಸಿ ಮಾಹಿತಿ ಕೇಂದ್ರವನ್ನು ಸುಮಾರು 18.09 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಅದನ್ನು ಮಾಡಿದ್ದೇವೆ. ಇತ್ತೀಚೆಗೆ ವಿದ್ಯುತ್ ಬಿಲ್ ಅನ್ನು ಕಟ್ಟಲಿಲ್ಲ ವೆಂದು ಹೇಳಿ, ಅಲ್ಲಿ ಕತ್ತಲೆಯಲ್ಲಿ ಗೋಲಗುಂಬಜ್ ಅನ್ನುವಂಥ ವಿಚಾರ ವನ್ನು ನಾನು ಪೇಪರ್‌ಗಳಲ್ಲಿ ನೋಡಿದ್ದೇನೆ. ಇದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಯಿಸಿ, ಮಾತನಾಡಿದ್ದೇನೆ. ಹಿಂದೆ ಇದ್ದಂಥವರಿಂದ, ಅಂದರೆ ಇದನ್ನು ಸರ್ಕಾರ ತನ್ನ ವಶಕ್ಕೆ ತೆಗೆದುಕೊಳ್ಳುವುದಕ್ಕಿಂತ ಮುಂಚೆ, ಅಲ್ಲಿ ಇದ್ದಂಥವರು ವಿದ್ಯುಚ್ಛಕ್ತಿಯ ಬಿಲ್ ಅನ್ನು ಕಟ್ಟದೇ, ಅದನ್ನು ನೆನಗುದಿಗೆ ಬೀಳುವಂತೆ ಆಗಿದೆ. ಆದರೂ ಕೂಡ ಶನಿವಾರ ಮತ್ತು ಭಾನುವಾರಗಳಂದು, ಮತ್ತು ದಿವಸಗಳಲ್ಲಿ

ಸೌಂಡ್ ಅಂಡ್ ಮ್ಯೂಸಿಕ್‌ಗೆ ಯಾವುದೇ ರೀತಿಯಲ್ಲಿ ವಿದ್ಯುಚ್ಛಕ್ತಿಯ ಕೊರತೆ ಇಲ್ಲ. ಇಡೀ ಬಿಲ್ಡಿಂಗ್‌ಗೆ ವಿದ್ಯುಚ್ಛಕ್ತಿಯ ಕೊರತೆ ಇದೆ. ಅದನ್ನು ಇನ್ನು ಒಂದು ವಾರದೊಳಗೆ ಸಂಬಂಧಪಟ್ಟಂತಹ ಅಧಿಕಾರಿಗಳನ್ನು ಕರೆಸಿ, ಕೆ.ಇ.ಬಿ. ಅಧಿಕಾರಿಗಳನ್ನು ಕರೆಸಿ, ಏಕೆ ಈ ರೀತಿಯ ತೊಂದರೆ ಯಾಗುತ್ತಿದೆಯೆಂಬುದನ್ನು ಗಮನಿಸಿ, ಆ ವಿದ್ಯುತ್ ಸೌಲಭ್ಯವನ್ನು ಕಲ್ಪಿಸಲು ಪ್ರಾಮಾಣಿಕ ಪ್ರಯತ್ನವನ್ನು ಸರ್ಕಾರ ಮಾಡುತ್ತದೆಂಬ ವಿಚಾರವನ್ನು ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.

ಶ್ರೀ ಅಪ್ಪಾಸಾಹೇಬ್ (ಅಪ್ಪು) ಮಲ್ಲಪ್ಪ ಪಟ್ಟಣ ಶೆಟ್ಟಿ :– ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರಲ್ಲಿ ನಾನು ಕೇಳುವಂಥಾದ್ದು ಏನೆಂದರೆ, ತಾವು ಏನು ಯಾತ್ರಿ ನಿವಾಸ್ ಅನ್ನು ಕೊಟ್ಟಿದ್ದೀರಿ. ಅದು ನಮ್ಮ ಅಸ್ತಿತ್ವದಲ್ಲಿ ಇಲ್ಲ. ಇದನ್ನು ಬೇರೆಯವರಿಗೆ ಮಳಯ್ಯ ಶೆಟ್ಟಿಯವರಿಗೆ ವರ್ಗಾವಣೆಯನ್ನು ಮಾಡಿ, ಬಾಡಿಗೆಗೆ ಕೊಟ್ಟಿದ್ದಾರೆ. ಮತ್ತೆ ಇಲ್ಲಿ ಮಯೂರ ಹೋಟೇಲ್‌ಗಳು ಬಂದ್ ಆಗಿದೆ. ಇಲ್ಲಿ ಎರಡು ಇತ್ತು ಅದರಲ್ಲಿ ಒಂದು ಅದನ್ನು ಸಹ ಮಳಯಾನಶೆಟ್ಟಿಯವರಿಗೆ ವಹಿಸಿಕೊಡಲಾಗಿದೆ. ಇನ್ನೊಂದು ಮಯೂರ ಎಂದು ಇದೆ, ಅದರಲ್ಲಿ ನಾಲ್ಕು ರೂಮುಗಳು ಇವೆ. ಅದು ನಾಲ್ಕು ರಿಪೇರಿ ಇದೆ. ನಾನು ಹೋಗಿ ನೋಡಿದೆ, ಇದು ವ್ಯವಸ್ಥಿತವಾದ ರೀತಿಯಲ್ಲಿ ಇಲ್ಲ. ಇಲ್ಲಿಗೆ ಬರುವಂತಹ ವಿದೇಶಿ ಪ್ರವಾಸಿಗರಿಗೆ ಸರ್ಕಾರದ ಅಧೀನದಲ್ಲಿ ನಡೆಯುವಂತಹ ಯಾವುದೇ ಹೋಟೆಲ್‌ಗಳಾಗಲೀ, ಅವು ಯಾವುದೂ ಇಲ್ಲ. ಇನ್ನೊಂದು ವಿಚಾರವನ್ನು ಮಾನ್ಯ ಸಚಿವರ ಗಮನಕ್ಕೆ ತರ ಬಯಸುತ್ತೇನೆ. ಇವತ್ತು ವಿಜಾಪುರದಲ್ಲಿರುವಂತಹ ಐತಿಹಾಸಿಕ ಸ್ಥಳಗಳು ವಿನಾಶದ ಅಂಚಿನಲ್ಲಿವೆ. ಇವೆಲ್ಲ ಎನ್‌ಕ್ರೋಜೆಮೆಂಟ್ ಆಗುತ್ತಿವೆ, ಮತ್ತೆ ಸ್ವಚ್ಛತೆಯಿಂದ ಇರುವುದಿಲ್ಲ. ರಸ್ತೆಗಳು ಇಲ್ಲ. ಈಗ ತಾಜ್ ಬಾವಡಿಯ ಬಗ್ಗೆ ಹೇಳಬೇಕೆಂದರೆ, ಇದಕ್ಕೆ ವಿಶೇಷವಾಗಿ ಹಣವನ್ನು ಕೊಟ್ಟು ರಿಪೇರಿ ಮಾಡಿಸಿದ್ದಿರೆಂದು ಉತ್ತರದಲ್ಲಿ ಕೊಟ್ಟಿದ್ದೀರಿ. ಈ ತಾಜ್ ಬಾವಡಿಯ ಸುತ್ತಮುತ್ತಲೂ ಇರುವಂತಹ ಕಟ್ಟಡಗಳನ್ನು ಸಾರ್ವಜನಿಕರು ಮತ್ತು ವಕ್ಫ್ ಇಲಾಖೆಯವರು ಅತಿಕ್ರಮಣ ಮಾಡುತ್ತಿದ್ದಾರೆ. ಇದು ಕೆಲವು ದಿವಸಗಳ ನಂತರ ಇಲ್ಲಿ ತಾಜ್ ಬಾವಡಿ ಇತ್ತೊ, ಇಲ್ಲವೋ ಎನ್ನುವಂತೆ ಆಗುತ್ತದೆ. ಸರ್ಕಾರ ಮತ್ತು ಸಚಿವರು ಇದರ ಬಗ್ಗೆ ವಿಶೇಷವಾದ ಗಮನವನ್ನು ಕೊಟ್ಟು ಈ ಅತಿಕ್ರಮಣದ ಬಗ್ಗೆ ಕೆಲಸವನ್ನು ಮಾಡಬೇಕೆಂದು ನಾನು ಮಾನ್ಯ ಸಚಿವರಲ್ಲಿ ಮನವಿಯನ್ನು ಮಾಡುತ್ತೇನೆ.

ಶ್ರೀ ಡಿ.ಟಿ. ಜಯಕುಮಾರ್ :– ಮಾನ್ಯ ಅಧ್ಯಕ್ಷರೇ, ಈ ಗೋಲ್‌ಗುಂಬಜ್ ಜೊತೆಗೆ ಆದಿಲ್‌ಶಾಯ ಕಾಲದಿಂದ ಬಂದಿರತಕ್ಕಂಥ ರಾಜವಂಶದವರು ಮಾಡಿರತಕ್ಕಂಥ ಜಮಿನಾ ಮಸೀದಿ, ಇಬ್ರಾಹಿಂರೋಜಾ, ಬಾರ್ಗಕಮಾನ, ಮಲ್ಲಿಕಾ ಮೈದಾನ, ಜೋಡಿ ಗುಮ್ಮಟ, ತಾಜ್ ಬಾವಡಿ, ಮುಂತಾದವುಗಳು ಸುತ್ತಮುತ್ತಲು ಇರತಕ್ಕಂತಹ ಪ್ರವಾಸಿ ಕೇಂದ್ರಗಳು. ಇದಕ್ಕಾಗಿ ಯಾತ್ರಿ ನಿವಾಸ ಅನ್ನು ಕಟ್ಟಿದ್ದೇವೆ. ಅದರ ಬಗ್ಗೆ ಮಾನ್ಯ ಸದಸ್ಯರು ಹೇಳಿದ ಹಾಗೆ ಸರಿಯಾಗಿ ಮೆಂಟೇನ್ ಮಾಡುವುದಕ್ಕೆ ಆಗುತ್ತಾ ಇಲ್ಲ. ಆದುದರಿಂದ ಇದನ್ನು ಖಾಸಗೀಕರಣ ಮಾಡುವಂತಹ ವಿಚಾರದ ಬಗ್ಗೆಯೂ ಕೂಡ ಸರ್ಕಾರರ ಯೋಚನೆ ಮಾಡುತ್ತಿದೆ.

ಶ್ರೀ ಡಿ.ಟಿ. ಜಯಕುಮಾರ್ (ಮುಂದುವರೆದುದು):– ಈಗಾಗಲೇ ಸುಮಾರು 18 ಯಾತ್ರಾ ನಿವಾಸಿಗಳು ಮತ್ತು ಹೋಟೆಲ್‌ಗಳನ್ನು ನಾವು ಒ ಎನ್ ಜಿ ಸಿ ಸಂಸ್ಥೆಗೆ ಕೊಟ್ಟಿದ್ದೇವೆ. ಅವರಿಗೆ ಆರು ತಿಂಗಳ ಗಡುವು ಕೊಟ್ಟಿದ್ದೇವೆ. ಅವರು ಉತ್ತಮ ರೀತಿಯಲ್ಲಿ ಅವುಗಳನ್ನು ಮೈನ್‌ಟೇನ್ ಮಾಡತಕ್ಕಂಥಾದ್ದು. ಶುಚಿ ಮತ್ತು ರುಚಿಯಾದಂಥ ಊಟದ ವ್ಯವಸ್ಥೆ ಮಾಡತಕ್ಕಂಥಾದ್ದನ್ನು ಮಾಡಬೇಕು. ಬಿಜಾಪುರ ಸರ್ಕ್ಯೂಟ್ ಎಂದು ಹೊಸದಾಗಿ 611 ಕೋಟಿ ರೂಪಾಯಿಗಳ ಒಂದು ಯೋಜನೆಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದೇವೆ. ಎಲ್ಲಾ ಯಾತ್ರಾ ಸ್ಥಳಗಳನ್ನು ಅಭಿವೃದ್ಧಿ ಪಡಿಸಲು ಒಂದು ದೊಡ್ಡ ಯೋಜನೆಯನ್ನು ಇಟ್ಟುಕೊಂಡಿದ್ದೇವೆ. ಆ ಸಂದರ್ಭದಲ್ಲಿ ಬಿಜಾಪುರಕ್ಕೆ ಹೆಚ್ಚಿನ ಕಾರ್ಯಕ್ರಮಗಳನ್ನು ಹಾಕಿ ಪ್ರವಾಸಿಗರಿಗೆ ಉತ್ತಮವಾದ ಸೌಲಭ್ಯಗಳನ್ನು ಕೊಡಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇವೆಂದು ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಿಗೆ ಹೇಳಲು ಬಯಸುತ್ತೇನೆ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಗೋವಿಂದ ಎಂ. ಕಾರಜೋಳದವರು ಉಪ ಪ್ರಶ್ನೆಯನ್ನು ಕೇಳಲು ಎದ್ದು ನಿಂತರು)

ಅಧ್ಯಕ್ಷರು :– ಒಂದು ಪ್ರಶ್ನೆಗೆ ಎಷ್ಟು ಉಪ ಪ್ರಶ್ನೆಗಳನ್ನು ಕೇಳುವುದು? ಒಂದು ಗಂಟೆಯಲ್ಲಿ ನಾನು 15 ಪ್ರಶ್ನೆಗಳನ್ನು ಮುಗಿಸಬೇಕು.

ಶ್ರೀ ಗೋವಿಂದ : ಎಂ. ಕಾರಜೋಳ :ಎರಡು ನಿಮಿಷದಲ್ಲಿ ಮುಗಿಸುತ್ತೇನೆ. ಜಗತ್ಪ್ರಸಿದ್ಧವಾದಂಥ ಗೋಳಗುಮ್ಮಟ ಬಿಜಾಪುರದಲ್ಲಿ ಇರುವುದರ ಜೊತೆಗೆ, ಆದಿಲ್ ಶಾಹಿ ಕಾಲದಲ್ಲಿ ಕಟ್ಟಿರುವಂಥ ಕೆಲವೊಂದು ಐತಿಹಾಸಿಕ ಕಟ್ಟಡಗಳು

ವಿನಾಶದ ಅಂಚಿನಲ್ಲಿದೆ. ಎರಡನೆಯದಾಗಿ ಅಲ್ಲಿಗೆ ಪ್ರವಾಸಿಗರನ್ನು ಸೆಳೆಯಬೇಕಾದರೆ ಅಲ್ಲಿಗೆ ವಿಮಾನ ನಿಲ್ದಾಣ ಬಹಳ ಮುಖ್ಯವಾಗಿ ಬೇಕು. ವಿಮಾನ ನಿಲ್ದಾಣವಾಗದ ಹೊರತು ಅಲ್ಲಿ ಪ್ರವಾಸಿಗರು ಬರಲು ಸಾಧ್ಯವಾಗುವುದಿಲ್ಲ. ಅದಕ್ಕಾಗಿ, ನಾನು ಸರ್ಕಾರಕ್ಕೆ ಏನು ವಿನಂತಿ ಮಾಡುತ್ತೇನೆಂದರೆ, ಒಂದು ಹೋಟೆಲ್ ಕಟ್ಟಿದ್ದೇವೆ. ಒಂದು ಯಾತ್ರಿ ನಿವಾಸ ಕಟ್ಟಿದ್ದೇವೆ ಎಂದ ಮಾತ್ರಕ್ಕೆ ಅಲ್ಲಿಗೆ ಪ್ರವಾಸಿಗರು ಬರುವುದಿಲ್ಲ. ಅದಕ್ಕಾಗಿ, ಅಲ್ಲಿ ಒಂದು ವಿಮಾನ ನಿಲ್ದಾಣ ಮಾಡಲು ಸರ್ಕಾರಕ್ಕೆ ಸಾಧ್ಯವಿದೆಯೇ ಎನ್ನುವುದು ನನ್ನ ಪ್ರಶ್ನೆ.

ಶ್ರೀ ಡಿ.ಟಿ. ಜಯಕುಮಾರ್ :– ಈಗ ಸದ್ಯಕ್ಕಂತೂ ವಿಮಾನ ನಿಲ್ದಾಣದ ಪ್ರಸ್ತಾವನೆಯಿಲ್ಲ ಎಂದು ನಾನಾದರೂ ಭಾವಿಸಿಕೊಂಡಿದ್ದೇನೆ. ಮುಂದಿನ ದಿನಗಳಲ್ಲಿ ಬಿಜಾಪುರ ಒಂದು ಪ್ರವಾಸಿಗರ ತಾಣವಾಗತಕ್ಕಂಥ ಯೋಜನೆಗಳಿರುವುದರಿಂದ, ಆಗ ಈ ಬಗ್ಗೆ ತೀರ್ಮಾನ ಮಾಡಬಹುದು. ಕೈಗಾರಿಕಾ ಸಚಿವರಾದಂಥ ಮಾನ್ಯ ಸಿಂಧ್ಯಾರವರು, ಗುಲ್ಬರ್ಗಾದಲ್ಲಿ ಬೆಳಗಾಂನಲ್ಲಿ , ಮೈಸೂರಿನಲ್ಲಿ ಮತ್ತು ಬೆಂಗಳೂರಿನಲ್ಲಿ ಉತ್ತಮವಾದಂಥ ವಿಮಾನ ನಿಲ್ದಾಣಗಳನ್ನು ಮಾಡತಕ್ಕಂಥಾದ್ದಕ್ಕೆ ಈಗಾಗಲೇ ಆಲೋಚನೆ ಮಾಡಿದ್ದಾರೆ. ಅದರಲ್ಲಿ ಬಿಜಾಪುರವನ್ನು ಕೂಡ ಸೇರಿಸಿ ಮಾಡಲು ಸಾಧ್ಯವಾಗುತ್ತದೆಯೇ ಎನ್ನುವುದನ್ನು ಪರಿಶೀಲಿಸಿ, ಅದನ್ನು ಕ್ಯಾಬಿನೆಟ್ ಮುಂದೆ ತಂದು ಅದರ ಬಗ್ಗೆ ತೀರ್ಮಾನವನ್ನು ಕೈಗೊಳ್ಳಲು ಪ್ರಯತ್ನ ಮಾಡುತ್ತೇವೆ.